# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **686** |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಇರುವ ಒಟ್ಟು ವಿದ್ಯುತ್ ಬಿಲ್ ನ ಮೊತ್ತ ಎಷ್ಟು; | ಬೆಂಗಳೂರು, ಮಂಗಳೂರು, ಚಾಮುಂಡೇಶ್ವರಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮೇ-2024ರ ಅಂತ್ಯಕ್ಕೆ ಹಾಗೂ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಗೆ 01-06-2024ಕ್ಕೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಇರುವ ಒಟ್ಟು ವಿದ್ಯುತ್ ಬಿಲ್ಲು ಮೊತ್ತದ ಕಂಪನಿವಾರು ವಿವರಗಳು ಕೆಳಗಿನಂತಿವೆ:- <br><br> **ಕಂಪನಿ** — **ಬಾಕಿ ಇರುವ ಒಟ್ಟು ವಿದ್ಯುತ್ ಬಿಲ್‌ನ ಮೊತ್ತ (ರೂ.ಕೋಟಿಗಳಲ್ಲಿ)**<br>ಬೆಸ್ಕಾಂ — 1518<br>ಮೆಸ್ಕಾಂ — 97<br>ಸೆಸ್ಕ್ — 222<br>ಹೆಸ್ಕಾಂ — 361<br>ಜೆಸ್ಕಾಂ — 580<br>**ಒಟ್ಟು — 2778** |
| ಆ) | ಕಾಲಕಾಲಕ್ಕೆ ಬಾಕಿ ಬಿಲ್ಲನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು; | ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನದಲ್ಲಿ ಮೀಸಲಿರಿಸಿರುವ ಎಸ್ಕ್ರೋ ಅನುದಾನವನ್ನು ತ್ರೈಮಾಸಿಕವಾರು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.<br><br>ಬಾಕಿ ಉಳಿದ ವಿದ್ಯುತ್ ಬಿಲ್ಲಿನ ಮೊತ್ತವನ್ನು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಪಾವತಿಸಬೇಕಾಗಿದ್ದು, ಸ್ವಂತ ಸಂಪನ್ಮೂಲದ ಸಂಗ್ರಹಣೆಯ ಕೊರತೆ ಉಂಟಾದಲ್ಲಿ ಬಿಲ್ಲನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ. |
| ಇ) | ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆಯೇ; ಯಾವ ಎಸ್ಕಾಂಗಳು ನಷ್ಟದಲ್ಲಿವೆ; (ಕಳೆದ 5 ವರ್ಷಗಳ ಮಾಹಿತಿ ಒದಗಿಸುವುದು) | ವಿದ್ಯುತ್ ಸರಬರಾಜು ಕಂಪನಿಗಳ ಕಳೆದ 5 ವರ್ಷದಲ್ಲಿನ ಲಾಭ/ನಷ್ಟದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |

<table>
<tr>
<td>ಈ)</td>
<td>ಹಣಕಾಸು ಸಮಸ್ಯೆಯಿಂದ ವಿದ್ಯುತ್ ಸರಬರಾಜುದಾರರಿಗೆ ತಡವಾಗಿ ಹಣ ಸರ್ ಚಾರ್ಜ್ ಕೊಡಲಾಗುತ್ತಿದೆಯೇ;<br>ಇಲ್ಲವಾದಲ್ಲಿ ಯಾವ ಕಾರಣಕ್ಕೆ ತಡವಾಗುತ್ತಿದೆ; ಕಳೆದ ಒಂದು ವರ್ಷದಲ್ಲಿ ಎಷ್ಟು ಲೇಟ್ ಸರ್ಚಾರ್ಜ್<br>ಪಾವತಿಸಲಾಗಿದೆಯೇ?</td>
<td>ವಿದ್ಯುತ್ ಸರಬರಾಜುದಾರರಿಗೆ ವಿದ್ಯುತ್ ಒಡಂಬಡಿಕೆಯ ನಿಯಮಾನುಸಾರ ವಿಳಂಬ ಪಾವತಿಗಳಿಗೆ ಸರ್ಚಾರ್ಜ್ (Late Payment Surcharge) ಪಾವತಿಸಲ್ಪಡುತ್ತದೆ. ವಿದ್ಯುತ್ ಸರಬರಾಜುದಾರರಿಗೆ ದೈನಂದಿನ ಹಣಕಾಸು ಅಭಾವದಿಂದಾಗಿ ವಾಯ್ದೆ ದಿನಾಂಕದೊಳಗೆ ಬಿಲ್ಲುಗಳನ್ನು ಪಾವತಿಸಲು ಸಾಧ್ಯವಾಗದ ಪಕ್ಷದಲ್ಲಿ ವಿಳಂಬ ಪಾವತಿ ಸರ್ಚಾರ್ಜ್ (Late Payment Surcharge)ನ್ನು ನಿಯಮಾನುಸಾರ ಪಾವತಿಸಬೇಕಿರುತ್ತದೆ.<br><br>2023-24ನೇ ಸಾಲಿನಲ್ಲಿ ವಿದ್ಯುತ್ ಸರಬರಾಜುದಾರರಿಗೆ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿಳಂಬ ಪಾವತಿ ಸರ್ಚಾರ್ಜ್ (Late Payment Surcharge) ಪಾವತಿಸಲಾದ ವಿವರಗಳು ಕೆಳಗಿನಂತಿವೆ:<br><br>
<table>
<tr><th>ಕಂಪನಿ</th><th>ಲೇಟ್ ಸರ್ಚಾರ್ಜ್ ಪಾವತಿಸಲಾದ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>ಬೆಸ್ಕಾಂ</td><td>03</td></tr>
<tr><td>ಮೆಸ್ಕಾಂ</td><td>0.00</td></tr>
<tr><td>ಸೆಸ್ಕ್</td><td>24</td></tr>
<tr><td>ಹೆಸ್ಕಾಂ</td><td>871</td></tr>
<tr><td>ಜೆಸ್ಕಾಂ</td><td>368</td></tr>
<tr><td>ಒಟ್ಟು</td><td>1266</td></tr>
</table>
</td>
</tr>
</table>

ಸಂಖ್ಯೆ: ಎನರ್ಜಿ 199 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 686ಕ್ಕೆ ಅನುಬಂಧ:-**

**ವಿದ್ಯುತ್ ಸರಬರಾಜು ಕಂಪನಿಗಳ ಕಳೆದ 5 ವರ್ಷಗಳಲ್ಲಿನ ಪ್ರಸಕ್ತ ಲಾಭ/ನಷ್ಟದ ಕಂಪನಿವಾರು ವಿವರಗಳು**

**ಬೆಸ್ಕಾಂ:**

**(ರೂ. ಕೋಟಿಗಳಲ್ಲಿ)**

| ಆರ್ಥಿಕ ವರ್ಷ | ಲಾಭ(+) /ನಷ್ಟ(-) |
|---|---|
| 2018-19 | (+)84.77 ಲಾಭ |
| 2019-20 | (+) 146.51 ಲಾಭ |
| 2020-21 | (+) 208.25 ಲಾಭ |
| 2021-22 | (-) 2919.54 ನಷ್ಟ |
| 2022-23 | (-) 1767.49 ನಷ್ಟ |

**ಮೆಸ್ಕಾಂ:**

**(ರೂ. ಕೋಟಿಗಳಲ್ಲಿ)**

| ಆರ್ಥಿಕ ವರ್ಷ | ಲಾಭ (+) / ನಷ್ಟ (-) |
|---|---|
| 2018-19 | (+) 56.39 ಲಾಭ |
| 2019-20 | (+) 43.57 ಲಾಭ |
| 2020-21 | (-) 52.97 ನಷ್ಟ |
| 2021-22 | (+) 32.70 ಲಾಭ |
| 2022-23 | (+) 51.85 ಲಾಭ |

**ಸೆಸ್ಕ್:**

**(ರೂ. ಕೋಟಿಗಳಲ್ಲಿ)**

| ವರ್ಷ | ಲಾಭ (+) / ನಷ್ಟ (-) |
|---|---|
| 2018-19 | (-) 209.35 ನಷ್ಟ |
| 2019-20 | (-) 366.63 ನಷ್ಟ |
| 2020-21 | (-) 723.19 ನಷ್ಟ |
| 2021-22 | (-) 422.84 ನಷ್ಟ |
| 2022-23 | (-) 297.65 ನಷ್ಟ |

**ಹೆಸ್ಕಾಂ:**

(ರೂ. ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಲಾಭ(+) /ನಷ್ಟ (-) |
|---|---|
| 2018-19 | (+) 689.99 ಲಾಭ |
| 2019-20 | (-) 682.21 ನಷ್ಟ |
| 2020-21 | (-)2490.26 ನಷ್ಟ |
| 2021-22 | (-) 1293.63 ನಷ್ಟ |
| 2022-23 | (-) 836.23 ನಷ್ಟ |

**ಜೆಸ್ಕಾಂ:**

(ರೂ. ಕೋಟಿಗಳಲ್ಲಿ)

| ಆರ್ಥಿಕ ವರ್ಷ | ಲಾಭ(+) / (ನಷ್ಟ)(-) |
|---|---|
| 2018-19 | (+) 319.77ಲಾಭ |
| 2019-20 | (-) 992.27ನಷ್ಟ |
| 2020-21 | (-) 1116.69 ನಷ್ಟ |
| 2021-22 | (+) 11.12 ಲಾಭ |
| 2022-23 | (-) 296.21 ನಷ್ಟ |